ಕರ್ನಾಟಕ ಸರ್ಕಾರ

**ಸಂಖ್ಯೆ: ಆರ್‌ಡಿ 117 ಮುನೋಮು 2009**

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
**ಬೆಂಗಳೂರು, ದಿನಾಂಕ: 11-03-2010.**

**ತಿದ್ದುಪಡಿ ಸುತ್ತೋಲೆ**

**ವಿಷಯ:** 11ಇ ನಕ್ಷೆ ಹಾಜರು ಪಡಿಸುವ ಬಗ್ಗೆ ಸ್ಪಷ್ಟೀಕರಣ.

*****

ಉಲ್ಲೇಖಿತ ವಿಷಯದ ಬಗ್ಗೆ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ: 30-07-2009ರಲ್ಲಿನ ಕಂಡಿಕೆ 2ರಲ್ಲಿ ಕೃಷಿ ಜಮೀನನ್ನು ಕೃಷಿಯೇತರ ಚಟುವಟಿಕೆಗಳಿಗೆ ಭೂ ಪರಿವರ್ತನೆ ಮಾಡುವಂತಹ ಪ್ರಕರಣಗಳನ್ನು ಪರಿಶೀಲಿಸುವ ಸಂಬಂಧ ಹೊರಡಿಸಲಾಗಿರುವ ಮಾರ್ಗಸೂಚಿಗಳಲ್ಲಿ ಭೂ ಪರಿವರ್ತನೆಗೊಳ್ಳಬೇಕಾದ ಜಮೀನಿನ 11ಇ ನಕ್ಷೆಯೊಂದಿಗೆ ವರದಿಯನ್ನು ತಹಶೀಲ್ದಾರರು ಮೇಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದೆಂದು ಸೂಚನೆ ನೀಡಲಾಗಿತ್ತು.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಜಮೀನುಗಳ ಸ್ವರೂಪ ಹಾಗೂ ಇತರೆ ಸ್ಥಳೀಯ ಸಮಸ್ಯೆಗಳನ್ನು ಪರಿಗಣಿಸಿ, ಈ ಎರಡು ಜಿಲ್ಲೆಗಳಲ್ಲಿ ಕೃಷಿ ಜಮೀನುಗಳನ್ನು, ಸ್ವಂತ ಮನೆ ನಿರ್ಮಾಣ ಅಥವಾ ಸ್ವಂತ ಉಪಯೋಗಕ್ಕಾಗಿ ಭೂ ಪರಿವರ್ತನೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದ್ದಲ್ಲಿ, ಇಂತಹ ಪ್ರಕರಣಗಳಿಗೆ 11ಇ ನಕ್ಷೆಯನ್ನು ಹಾಜರು ಪಡಿಸುವ ನಿಬಂಧನೆಯಿಂದ ವಿನಾಯ್ತಿ ನೀಡಲಾಗಿದೆ. ಆದರೆ ಈ ವಿನಾಯ್ತಿಯು ಭೂಮಿಯನ್ನು ಮಾರಾಟ ಮಾಡುವ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ. ಈ ತಿದ್ದುಪಡಿಯು ತಕ್ಷಣದಿಂದ ಜಾರಿಗೆ ಬರುತ್ತದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ
ನಂ. 720, ... ಭವನ, ಜಯನಗರ
ಬೆಂಗಳೂರು - 560 082
ಸ್ವೀಕೃತಿ ಸಂಖ್ಯೆ: 1654
ದಿನಾಂಕ: 23.3.10.

(ಜಿ. ಎಸ್. ನಾರಾಯಣಸ್ವಾಮಿ)
ಸರ್ಕಾರದ ಕಾರ್ಯದರ್ಶಿ,
ಕಂದಾಯ ಇಲಾಖೆ.

ಇವರಿಗೆ,

1. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
2. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
3. ಆಯುಕ್ತರು, ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ಉಪ ವಿಭಾಗಾಧಿಕಾರಿಗಳು.
6. ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು.
7. ಎಲ್ಲಾ ತಹಶೀಲ್ದಾರರುಗಳಿಗೆ,
8. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು,
9. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ.
10. ಮಾನ್ಯ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ.
11. ಭೂ ದಾಖಲೆಗಳ ಜಂಟಿ ನಿರ್ದೇಶಕರು, ದಕ್ಷಿಣ ವಲಯ, ಬೆಂಗಳೂರು/ಉತ್ತರ ವಲಯ, ಬೆಳಗಾಂ,
12. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, (ಭೂ ಮಾಮನ/ಭೂಸ್ವಾಧೀನ) ಕಂದಾಯ ಇಲಾಖೆರವರ ಆಪ್ತ ಸಹಾಯಕರು,
13. ಎಲ್ಲಾ ಭೂ ದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ,
14. ಎಲ್ಲಾ ಭೂ ದಾಖಲೆಗಳ ಸಹಾಯಕ ನಿರ್ದೇಶಕರು,(ಕಾ.ನಿ),
15. ಹೆಚ್ಚುವರಿ ಪ್ರತಿಗಳು.